


# ಕೆಮ್ಮು ಅಸ್ತಮಾ ಇರಬಹುದೇ?



**ಕೆ**ಮ್ಮು, ನಿರಂತರ ಕೆಮ್ಮು, ವಾರಗಟ್ಟಲೆ ಕೆಮ್ಮಿದ್ದರೆ ಅದು ನೆಗಡಿಯಿಂದ ಬಂದಿದ್ದಾ ಅಥವಾ ಏನಾದರೂ ಗಂಭೀರ ಕಾಯಿಲೆಯ ಲಕ್ಷಣವಾ? ಎಂಟು ವಾರಗಳಿಗಿಂತ ಅಧಿಕ ಕಾಲ ತೀವ್ರತರ ಕೆಮ್ಮಿದ್ದರೆ ಅದು ಗಂಭೀರ ಕಾಯಿಲೆಯ ಲಕ್ಷಣ. ವೈದ್ಯರಿಗೆ ಭೇಟಿ ಕೊಡುವವರಲ್ಲಿ ಐದು ಪ್ರಮುಖ ಲಕ್ಷಣಗಳಲ್ಲಿ ಒಂದು ಕೆಮ್ಮಾಗಿರುತ್ತದೆ.

ಕೆಮ್ಮಿಗೆ ಪ್ರಮುಖ ಕಾರಣಗಳು:

ಅಸ್ತಮಾ

ಶ್ವಾಸನಾಳ ಊದಿಕೊಂಡು ಉರಿ ತಲೆದೋರುವ ಇದು ತೀವ್ರವಾದ ಕಾಯಿಲೆ. ಎದೆ ಕಟ್ಟಿದಂತಾಗುವುದು, ಉಸಿರು ಕಟ್ಟಿಕೊಂಡಂತಾಗುವುದು, ಏದುಸಿರು, ಕೆಮ್ಮು ಇದರ ಲಕ್ಷಣ. ರಾತ್ರಿ ಅಥವಾ ಮುಂಜಾನೆ ಕೆಮ್ಮಿನ ತೀವ್ರತೆ ಜಾಸ್ತಿಯಾಗುತ್ತದೆ. ಇವೆಲ್ಲ ಲಕ್ಷಣಗಳು ಹೆಚ್ಚಾದಾಗ ಅಸ್ತಮಾ ಆಘಾತಕ್ಕೆ ಒಳಗಾಗುತ್ತಾರೆ.

ಅಸ್ತಮಾ ಸಾಮಾನ್ಯವಾಗಿ ಚಿಕ್ಕ ವಯಸ್ಸಿನಲ್ಲಿಯೇ ಕಾಣಿಸಿಕೊಳ್ಳುತ್ತದೆ. ವ್ಯಾಯಾಮ, ನೆಗಡಿ, ಸಿಗರೇಟ್ ಸೇವನೆ, ಗಾಳಿಯಲ್ಲಿರುವ ಅಲರ್ಜಿ ವಸ್ತುಗಳು, ಕೆಲವು ಆಹಾರದಿಂದ ಅಸ್ತಮಾ ತೊಂದರೆ ಅಧಿಕವಾಗುತ್ತದೆ. ಅಲರ್ಜಿ ಕೂಡಾ ಇದರ ಲಕ್ಷಣ. ಕೆಮ್ಮು ಅಲರ್ಜಿಯಿಂದ ಉಂಟಾದದ್ದೇ ಎಂಬುದನ್ನು ತೀರ್ಮಾನಿಸಬೇಕು. ಹವಾ ನಿಯಂತ್ರಣ ಕೊಠಡಿಯಲ್ಲಿದ್ದರೆ ಕೆಮ್ಮು ಕಡಿಮೆಯಾಗಬಹುದು. ಪರಾಗರೇಣು ಅಧಿಕವಿರುವ ದಿನಗಳಲ್ಲಿ, ಸಾಕುಪ್ರಾಣಿ ಸಮೀಪವಿದ್ದಾಗ ಕೆಮ್ಮು ಜಾಸ್ತಿಯಾಗಬಹುದು.

ಕ್ರೋನಿಕ್ ಅಬ್‌ಸ್ಟ್ರಕ್ಟಿವ್ ಪಲ್ಮನರಿ ಕಾಯಿಲೆ

ತೀವ್ರವಾದ ಬ್ರೋಂಕೈಟಿಸ್ ಕಾಯಿಲೆ. ಶ್ವಾಸನಾಳ ಹಾಗೂ ಶ್ವಾಸಕೋಶದ ಊರಿಯೂತ ಅಥವಾ ಅವುಗಳಿಗೆ ಧಕ್ಕೆ ಉಂಟಾಗುವುದು ಅದರ ಲಕ್ಷಣ. ಧೂಮಪಾನ ಇದಕ್ಕೆ ಕಾರಣ ಹಾಗೂ 45ರ ನಂತರ ಇದು ಸಾಮಾನ್ಯ. ಶ್ವಾಶಕೋಶ ಸ್ಲೇಶ್ಮವನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುತ್ತದೆ. ಇದರಿಂದ ದೇಹ ಕೆಮ್ಮಿನ ಮೂಲಕ ಆರಾಮ ಪಡೆಯಲು ಯತ್ನಿಸುತ್ತದೆ.

ರಕ್ತನಾಳಗಳಿಗೂ ಧಕ್ಕೆಯುಂಟಾಗಿ ಶ್ವಾಸನಾಳದಿಂದ ಗಾಳಿಯನ್ನು ಹೊರಹಾಕಲು ಕಷ್ಟವಾಗುತ್ತದೆ.

ಗ್ಯಾಸ್ಟ್ರೊ ಎಸೊಫೇಜಿಯಲ್ ರಿಫ್ಲಕ್ಸ್ ಕಾಯಿಲೆ (ಜಿಇಆರ್‌ಡಿ)

ಈ ಸಮಸ್ಯೆ ಇರುವವರಿಗೆ ಜಠರದಲ್ಲಿರುವ ಆಮ್ಲ ಅನ್ನನಾಳ ಪ್ರವೇಶಿಸುತ್ತದೆ. ಇದರಿಂದ ತೀವ್ರವಾದ ಎದೆಯುರಿ ಶುರುವಾಗುತ್ತದೆ. ಜೊತೆಗೆ ಕೆಮ್ಮು, ಎದೆನೋವು, ಏದುಸಿರು. ಆದರೆ ಜಿಇಆರ್‌ಡಿಯನ್ನು ತಕ್ಷಣ ಪತ್ತೆ ಹಚ್ಚಲು ಸಾಧ್ಯವಿಲ್ಲ.

ಶ್ವಾಸನಾಳದ ಸೋಂಕು

ಶ್ವಾಸನಾಳಕ್ಕೆ ಸೋಂಕು ತಗುಲಿದರೂ ಕೆಮ್ಮು ಕಾಣಿಸಿಕೊಳ್ಳುತ್ತದೆ. ಇತರ ಲಕ್ಷಣಗಳೆಂದರೆ ನೆಗಡಿ, ಜ್ವರ, ಕಟ್ಟಿಕೊಳ್ಳುವ ಮೂಗು.

ಇನ್ನೊಂದು ಬಗೆಯ ಸೋಂಕೆಂದರೆ ನ್ಯುಮೋನಿಯ. ಕೆಮ್ಮು ಜೊತೆಗೆ ಹಸಿರು, ಕಂದು ಮಿಶ್ರಿತ ಕಫ. ಜ್ವರ, ನಡುಕ, ಎದೆನೋವು, ಆಯಾಸ ಮತ್ತು ವಾಂತಿ ಬರುವಂತಾಗುವುದು ಇತರ ಲಕ್ಷಣಗಳು.

ವಯಸ್ಸಾದವರಿಗೆ ಕೆಮ್ಮಿದ್ದರೂ ಕಫ ಬರುವ ಸಾಧ್ಯತೆ ಕಡಿಮೆ. ಜ್ವರದ ಲಕ್ಷಣಗಳೂ ಗೋಚರಿಸುವುದಿಲ್ಲ. ನ್ಯುಮೋನಿಯಾವನ್ನು ಆ್ಯಂಟಿ ಬಯೋಟಿಕ್‌ನಿಂದ ಗುಣಪಡಿಸಬಹುದು. ನೆಗಡಿ ಹಾಗೂ ಜ್ವರವೂ ಕಡಿಮೆಯಾಗುತ್ತದೆ. ಆದರೆ ಕೆಮ್ಮಿನ ಸಮಸ್ಯೆ ಬಹಳ ದಿನಗಳ ಕಾಲ ಕಾಡಬಹುದು.

ಪರಿಸರ ಮಾಲಿನ್ಯ

ಗಾಳಿಯಲ್ಲಿರುವ ಕೆಲವು ಕಣಗಳು ಕೆಮ್ಮಿಗೆ ಕಾರಣ. ಧೂಳು, ಹೊಗೆಯಿಂದಲೂ ಕೆಮ್ಮು ಕಾಣಿಸಿಕೊಳ್ಳುತ್ತದೆ.

ಔಷಧ

ಅಧಿಕ ರಕ್ತದೊತ್ತಡ ಹಾಗೂ ಹೃದಯಾಘಾತಕ್ಕೆ ಬಳಸುವ ಎಸಿಇ ಇನ್‌ಹಿಬಿಟರ್ಸ್ ಔಷಧದಿಂದ ಕೆಲವರಿಗೆ ಒಣ ಕೆಮ್ಮು ಕಾಣಿಸಿಕೊಳ್ಳುತ್ತದೆ. ಔಷಧಿ ನಿಲ್ಲಿಸಿದ ನಂತರ ಇದು ಕಡಿಮೆಯಾಗುತ್ತದೆ.

ಪೆರ್ಟುಸಿಸ್

ಬ್ಯಾಕ್ಟೀರಿಯಾದಿಂದ ಜ್ವರ, ನೆಗಡಿ, ತೀವ್ರ ಕೆಮ್ಮು ಕಾಣಿಸಿಕೊಳ್ಳುತ್ತದೆ. ಉಸಿರಾಟ ಕಷ್ಟವಾಗುತ್ತದೆ. ಉಸಿರನ್ನು ಒಳಗೆಳೆದುಕೊಳ್ಳುವಾಗ ಒಂದು ರೀತಿಯ ಶಬ್ದ ಬರುತ್ತದೆ.

ಮಕ್ಕಳಿಗೆ ಈ ಕಾಯಿಲೆ ಬಗ್ಗೆ ಲಸಿಕೆ ಹಾಕಿಸಿದರೂ 10 ವರ್ಷಗಳ ಕಾಲ ಮಾತ್ರ ಲಸಿಕೆ ಕೆಲಸ ಮಾಡುತ್ತದೆ. ಈ ಕಾಯಿಲೆಗೆ ಇನ್ನೂ ಉತ್ತಮ ಔಷಧಿಯನ್ನು ಕಂಡು ಹಿಡಿದಿಲ್ಲ.

■ ಸುಧಿ




**ಬಿಳಿ ಮಚ್ಚೆಗಳೆ**

**ಪರಿಣಿತಿಯನ್ನು 50,000 ರೋಗಿಗಳು ಮೆಚ್ಚಿದ್ದಾರೆ.**

ಹೊಸದಾಗಿ ಕಂಡುಹಿಡಿಯಲಾದ ಈ ಔಷಧಿಯನ್ನು ಉಪಯೋಗಿಸುವುದರಿಂದ ನಿಮ್ಮ ತ್ವಚೆಯ ವರ್ಣವು ಅಲ್ಪಕಾಲದಲ್ಲೇ ನೈಜವಾಗಿ ಬದಲಾಗುವುದು. ನಿಮ್ಮ ಕಾಯಿಲೆಯ ವಿವರಗಳನ್ನು ಕಳುಹಿಸಿರಿ ಅಥವಾ ದೂರವಾಣಿ ಮೂಲಕ ಮುಖ್ಯ ವೈದ್ಯಜಿಯನ್ನು ಸಂಪರ್ಕಿಸಿ.



**ಲೈಂಗಿಕ ಸಮಸ್ಯೆ**

**ಖಂಡಿತ ಗುಣವಾಗುವುದು**

ನಪುಂಸಕತೆ, ಗೊನೊರಿಯ, ಸಿಫಿಲಿಸ್, ಬಂಜೆತನ ಹಾಗೂ ಇತರೆ ಗೋಪ್ಯ ಲೈಂಗಿಕ ಸಮಸ್ಯೆಗಳನ್ನು ಆಯುರ್ವೇದಿಕ್ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ಒಂದು ಕೋರ್ಸ್ ಔಷಧಿ ಹಾಗೂ ಉಚಿತ ಲಿಂಗವರ್ಧಕ್‌ಗೆ ನಮ್ಮನ್ನು ಸಂಪರ್ಕಿಸಲು ಸಂಕೋಚಪಡದಿರಿ.

**ಸ್ತ್ರೀ ರೋಗ**

ಬಿಳಿಸೆರಗು– ಬಿಳಿ ಅಥವಾ ರಕ್ತ, ಮುಟ್ಟಿನ ತೊಂದರೆ, ಬಂಜೆತನ, ರಕ್ತಹೀನತೆ ಅಶಕ್ತತೆ, ಸೊಂಟದ ನೋವು ಇತ್ಯಾದಿಗೆ ಖಾತರಿಯಾದ ಚಿಕಿತ್ಸೆಗಾಗಿ ಕೂಡಲೆ ನಮ್ಮನ್ನು ಸಂಪರ್ಕಿಸಿ.

**ಆಕರ್ಷಕ ಸ್ತನಗಳಿಗೆ**



ನಮ್ಮ ಯಶಸ್ವಿ ಆಯುರ್ವೇದಿಕ್ ಚಿಕಿತ್ಸೆ ಪಡೆದು ಅಲ್ಪಕಾಲದಲ್ಲೇ ನಿಮ್ಮ ಸ್ತನಗಳು ಸೂಕ್ತ ವೃದ್ಧಿ ಹೊಂದಲು ನಮ್ಮನ್ನು ಮುಕ್ತವಾಗಿ

**Asia Ayurved P.O. Katri Sarai (Gaya)**

**Phone: 0631-2224881**
**09931840701 / 09334221088**
**09431025482 / 09835671211**